# ಕನ್ನಡ ಭಾಷೆ ಉಳಿಯಬೇಕಾದರೆ ಸರ್ಕಾರಿ ಶಾಲೆಗಳು ಉಳಿಯಬೇಕು-ಕಿರಣ್ ಸಾಗರ್



[illegible]

---

ಮಕ್ಕಳಿಗೆ ವಿಜ್ಞಾನ ವಿಚಾರಗಳನ್ನು ಮನದಟ್ಟು ಮಾಡುವ ಉದ್ದೇಶದಿಂದ 3ಡಿ ಆಯಾಮಗಳ ಪ್ರಾತ್ಯಕ್ಷಿಕೆ

# ಶಾಲೆ ಅಂಗಳಕ್ಕೆ 'ಸಂಚಾರಿ ತಾರಾಲಯ'

• ಮನೋಹರ್ ಎಂ.

ಬೆಂಗಳೂರು: ಶೈಕ್ಷಣಿಕ ಪ್ರವಾಸಕ್ಕೆಂದು ಬೆಂಗಳೂರಿಗೆ ಬರುವ ವಿದ್ಯಾರ್ಥಿಗಳು ನೆಹರೂ ತಾರಾಲಯ ವೀಕ್ಷಿಸದೆ ಮರಳುವುದಿಲ್ಲ. ಇನ್ನುಮುಂದೆ ತಾರಾಲಯ ನೋಡುವ ಸಲುವಾಗಿ ವಿದ್ಯಾರ್ಥಿಗಳು ರಾಜಧಾನಿಗೆ ಬರಬೇಕಾಗಿಲ್ಲ. 'ಸ್ಪೈಪಾರ್ಕ್ 360 ಡಿಗ್ರಿ ಸಂಚಾರಿ ತಾರಾಲಯ'ವನ್ನು ತಮ್ಮ ಶಾಲಾ ಅಂಗಳದಲ್ಲೇ ವೀಕ್ಷಿಸಬಹುದು.

ರಾಜ್ಯದ ಎಲ್ಲ ಸರ್ಕಾರಿ ಶಾಲಾ ಮಕ್ಕಳಿಗೆ ವಿಜ್ಞಾನದ ವಿಚಾರಗಳನ್ನು ಮನದಟ್ಟು ಮಾಡುವ ಉದ್ದೇಶದಿಂದ ಯುವ ಬೆಂಗಳೂರು ಟ್ರಸ್ಟ್ ಹಾಗೂ ಡ್ರೈರಿ ಡೇ ಸಂಸ್ಥೆಗಳು ಇದನ್ನು ಅಭಿವೃದ್ಧಿಪಡಿಸಿವೆ. ಈ ತಾರಾಲಯವನ್ನು ಸುಲಭವಾಗಿ ಎಲ್ಲಿಗಾದರೂ ಕೊಂಡೊಯ್ಯಬಹುದು. ವೀಕ್ಷಣೆಯ ಬಳಿಕ ತಾರಾಲಯವನ್ನು ಮಡಚಿ ಒಂದು ಬ್ಯಾಗ್ ಒಳಗೆ ತುಂಬಿಸಿ ಇನ್ನೊಂದು ಕಡೆಗೆ ಒಯ್ಯಬಹುದು.

'ರಾಜ್ಯದಲ್ಲಿ ಸದ್ಯ ಬೆಂಗಳೂರು, ಮಂಗಳೂರು ಹಾಗೂ ಬಳ್ಳಾರಿಯಲ್ಲಿ ಮಾತ್ರ ತಾರಾಲಯಗಳಿವೆ. ಬಳ್ಳಾರಿ ತಾರಾಲಯ ತಾತ್ಕಾಲಿಕವಾಗಿ ಸ್ಥಗಿತವಾಗಿದೆ. ತಾರಾಲಯ ವೀಕ್ಷಿಸಲು ವಿದ್ಯಾರ್ಥಿಗಳು ₹300ರಿಂದ ₹400 ಹಣ ವ್ಯಯಿಸಿ ಬೆಂಗಳೂರಿಗೆ ಬರಬೇಕಾದ ಸ್ಥಿತಿ ಇದೆ. ಈ ಸಮಸ್ಯೆ ತಪ್ಪಿಸಲು ವಿದ್ಯಾರ್ಥಿಗಳ ಸನಿಹವೇ ತಲುಪುವಂತೆ ಈ ಸಂಚಾರಿ ತಾರಾಲಯವನ್ನು ರೂಪಿಸಿದ್ದೇವೆ' ಎಂದು ಸಂಸ್ಥೆಯ ಸ್ಥಾಪಕ ಕಿರಣ್ ಸಾಗರ್ 'ಪ್ರಜಾವಾಣಿ'ಗೆ ತಿಳಿಸಿದರು.

> **ವಿದ್ಯಾರ್ಥಿಗಳಿಗೆ ಬಾಹ್ಯಾಕಾಶಕ್ಕೆ ಸಂಬಂಧಿಸಿದ ಮಾಹಿತಿ ಕಡಿಮೆ ಇದೆ. ಹೀಗಾಗಿ ಸರ್ಕಾರಿ ಶಾಲೆಗಳನ್ನು ತಲುಪುವ ಉದ್ದೇಶದಿಂದ ಸಂಚಾರಿ ತಾರಾಲಯವನ್ನು ತಯಾರಿಸಲಾಗಿದೆ**
>
> **ಕಿರಣ್ ಸಾಗರ್,**
> ಯುವ ಬೆಂಗಳೂರು ಟ್ರಸ್ಟ್ ಸ್ಥಾಪಕ

'ಬಾಹ್ಯಾಕಾಶದ ಬಗ್ಗೆ ಮಕ್ಕಳಿಗೆ ಪಾಠ ಕೇಳುವುದಕ್ಕಿಂತ ಅದನ್ನು ದೃಶ್ಯಗಳಲ್ಲಿ ತೋರಿಸಿದರೆ ಅವರ ಮನಸ್ಸಿಗೆ ನಾಟುತ್ತದೆ. ಹೀಗಾಗಿ ರಾಜ್ಯದಲ್ಲಿರುವ ಎಲ್ಲ ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತವಾಗಿ ತಾರಾಲಯದ ಮೂಲಕ ಬಾಹ್ಯಾಕಾಶ ವೀಕ್ಷಣೆಯ ಅವಕಾಶ ನೀಡುವ ಉದ್ದೇಶ ನಮ್ಮದು' ಎಂದರು.




ಸಂಚಾರಿ ತಾರಾಲಯದ ಒಳನೋಟ

'ಇದಕ್ಕಾಗಿ ಬಾಹ್ಯಾಕಾಶಕ್ಕೆ ಸಂಬಂಧಿಸಿದ 31 ವಿಷಯಗಳ ಬಗ್ಗೆ 'ಮೂರು ಆಯಾಮಗಳ ಪ್ರಾತ್ಯಕ್ಷಿಕೆ' (3ಡಿ) ತಂತ್ರಜ್ಞಾನದ ಮೂಲಕ ಸಿದ್ಧಪಡಿಸಿದ್ದೇವೆ. ಇದು ನರ್ಸರಿಯಿಂದ ದ್ವಿತೀಯ ಪಿಯುಸಿವರೆಗಿನ ವಿಜ್ಞಾನ ಪಠ್ಯಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒಳಗೊಂಡಿದೆ. ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ವಿದ್ಯಾರ್ಥಿಗಳ ಜೊತೆ ಮಾತನಾಡುವಂತೆ ಹಿನ್ನೆಲೆ ಧ್ವನಿ ಅಳವಡಿಸಲಾಗಿದೆ' ಎಂದು ವಿವರಿಸಿದರು.

## ಉದ್ಘಾಟನೆ ಇಂದು

ಈ ಸಂಚಾರಿ ತಾರಾಲಯದ ಉದ್ಘಾಟನಾ ಕಾರ್ಯಕ್ರಮ ಸೋಮವಾರ (ಅ.21) ಸಂಜೆ 4 ಗಂಟೆಗೆ ರಾಜಾಜಿನಗರದಲ್ಲಿರುವ ಪಿವಿಪಿ ಪ್ರೌಢಶಾಲೆಯ ಗಾಂಧಿಭವನದಲ್ಲಿ ನಡೆಯಲಿದೆ. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್, ನಟ ರಮೇಶ್ ಅರವಿಂದ್, ಡ್ರೈರಿ ಡೇ ಸಹ ಸಂಸ್ಥಾಪಕರಾದ ಎಂ.ಎನ್.ಜಗನ್ನಾಥ್, ಎ.ಬಾಲರಾಜು ಭಾಗವಹಿಸಲಿದ್ದಾರೆ. ಈ ಸಂಚಾರಿ ತಾರಾಲಯವನ್ನು ಸರ್ಕಾರಿ ಶಾಲೆಗೆ ಉಚಿತವಾಗಿ ತರಿಸಿಕೊಳ್ಳಬಹುದು. ಸಂಪರ್ಕ: 8660821611

## 'ವಿಶೇಷತೆಗಳು

- ಗುಮ್ಮಟದ ಆಕಾರದಲ್ಲಿರುವ ತಾರಾಲಯ
- ₹40 ಲಕ್ಷ ವೆಚ್ಚದಲ್ಲಿ ನಿರ್ಮಾಣ
- 40ರಿಂದ 45 ವಿದ್ಯಾರ್ಥಿಗಳಿಗೆ ಆಸನ ವ್ಯವಸ್ಥೆ
- '360 ಡಿಗ್ರಿ ಪ್ರೊಜೆಕ್ಟರ್' ಮೂಲಕ ಕಾರ್ಯನಿರ್ವಹಿಸಲಿದೆ
- ಕನ್ನಡ, ಇಂಗ್ಲಿಷ್ ಭಾಷೆಗಳಲ್ಲಿ ಬಾಹ್ಯಾಕಾಶ ವಿಷಯಗಳ ಪ್ರಸ್ತುತಿ

'ತಾರಾಲಯವನ್ನು 80 ಲಕ್ಷ ವಿದ್ಯಾರ್ಥಿಗಳಿಗೆ ತಲುಪಿಸುವ ಉದ್ದೇಶವಿದೆ. ಇದು ನೋಡಲು ಗುಮ್ಮಟ (ಡೋಮ್) ಆಕಾರದಲ್ಲಿದೆ. ಒಮ್ಮೆಗೆ 45 ವಿದ್ಯಾರ್ಥಿಗಳು ವೀಕ್ಷಣೆ ಮಾಡುವಷ್ಟು ಆಸನ ವ್ಯವಸ್ಥೆ ಇದೆ. ಇದು ನೀರು, ಹಾಗೂ ಬೆಂಕಿ ನಿರೋಧಕವಾಗಿದ್ದು, ₹14 ಲಕ್ಷ ಮೌಲ್ಯದ ಅಪರೂಪದ '360 ಡಿಗ್ರಿ ಪ್ರೊಜೆಕ್ಟರ್' ಮೂಲಕ ಕಾರ್ಯನಿರ್ವಹಿಸಲಿದೆ' ಎಂದರು.

# ಸರಕಾರಿ ಶಾಲೆಗಳ ಅಭಿವೃದ್ಧಿಗೆ ಸಹಕಾರ

## ಕಳ್ಳಂಬೆಳ್ಳ ಸರಕಾರಿ ಶಾಲೆಯ ನರ್ಸರಿ ಮಕ್ಕಳಿಗೆ ಬ್ಯಾಗ್, ನೋಟ್‌ಬುಕ್ ವಿತರಣೆ



ಶಿರಾ:ಸರಕಾರಿ ಶಾಲೆಗಳು ಉಳಿಯಬೇಕು, ಅಭಿವೃದ್ಧಿಯಾಗಬೇಕು. ಸರಕಾರಿ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಿದರೆ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರಕುವುದರ ಜೊತೆಗೆ ದಾಖಲಾತಿಯೂ ಸಹ ಹೆಚ್ಚಾಗುತ್ತದೆ ಎಂಬ ಉದ್ದೇಶದಿಂದ ಯುವ ಬೆಂಗಳೂರು ಟ್ರಸ್ಟ್ ವತಿಯಿಂದ ಸರಕಾರಿ ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿಪಡಿಸಲಾಗುತ್ತದೆ ಎಂದು ಯುವ ಬೆಂಗಳೂರು ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷರಾದ ಜಿ.ಕಿರಣ್ ಸಾಗರ್ ಹೇಳಿದರು.

ತಾಲ್ಲೂಕಿನ ಕಳ್ಳಂಬೆಳ್ಳ ಗ್ರಾಮದಲ್ಲಿರುವ ಸರಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯ ಎಲ್.ಕೆ.ಜಿ, ಯುಕೆಜಿ ನರ್ಸರಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ಸ್ಮಾರ್ಟ್ ಕ್ಲಾಸ್ ನಿರ್ಮಾಣ ಮಾಡಿ, ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿಗಳನ್ನು, ನೋಟ್ ಪುಸ್ತಕ, ಪಠ್ಯಪುಸ್ತಕ, ಬ್ಯಾಗ್, ಸಮವಸ್ತ್ರ ವಿತರಿಸಿ ಮಾತನಾಡಿದರು. ರಾಷ್ಟ್ರೀಯ ಶಿಕ್ಷಣ ನೀತಿಯ ಅನುಸಾರ ಇನ್ನು ಮುಂದೆ ಸರಕಾರಿ ಶಾಲೆಗಳಲ್ಲಿ ನರ್ಸರಿ ತರಗತಿಯನ್ನು ಪ್ರಾರಂಭ ಮಾಡಲು ಸರಕಾರ ನಿರ್ಧರಿಸಿದೆ. ಈಗಾಗಲೇ ಹಲವು ಶಾಲೆಗಳಲ್ಲಿ ನರ್ಸರಿ ಶಾಲೆ ಪ್ರಾರಂಭವಾಗಿದೆ. ಅದರಲ್ಲಿ ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ಶಾಲೆಯೂ ಸಹ ಒಂದು. ಸುಮಾರು ವರ್ಷಗಳಿಂದ ನರ್ಸರಿ ಶಾಲೆಗಳ್ನು ನಡೆಸುತ್ತಿದ್ದರೂ ಮೂಲಭೂತ ಸೌಕರ್ಯಗಳಿರಲಿಲ್ಲ. ಇದನ್ನು ಮನಗಂಡ ಯುವ ಬೆಂಗಳೂರು ಟ್ರಸ್ಟ್ ಅಲ್ಲಿನ ಎಲ್‌ಕೆಜಿ, ಯುಕೆಜಿ ತರಗತಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ನಿರ್ಧರಿಸಿ ಮೊದಲು ಮಕ್ಕಳ ಕಲಿಗೆ ಅನುಕೂಲವಾಗುವಂತಹ ಬಣ್ಣಬಣ್ಣದ ಚಿತ್ರಗಳನ್ನು ಗೋಡೆಗಳಿಗೆ ಬಿಡಿಸಲಾಯಿತು. ನಂತರ ವಿವಿಧ ಬಣ್ಣದ ದೀಪಗಳನ್ನು ಹಾಕಿ, ಡೆಸ್ಕ್ ನೀಡಲಾಯಿತು. ಇದರೊಂದಿಗೆ ಮಕ್ಕಳು ಆಟವಾಡಲು ದೊಡ್ಡದೊಡ್ಡ ಆಟಿಕೆಗಳನ್ನು ನೀಡಲಾಗಿದೆ. ಒಟ್ಟಾರೆ ಶಾಲೆಗೆ ಸ್ಮಾರ್ಟ್ ಕ್ಲಾಸ್ ನಡೆಸಲು ಪ್ರೊಜೆಕ್ಟರ್ ನೀಡಲಾಗಿದೆ. ಸಂಪೂರ್ಣ ಸ್ಮಾರ್ಟ್ ರೀತಿಯಲ್ಲಿ ಮಾಡಲು ವ್ಯವಸ್ಥೆ ಮಾಡಲಾಗಿದೆ. ಯುವ ಬೆಂಗಳೂರು ಟ್ರಸ್ಟ್‌ನಿಂದ ಇದು ನಿರಂತರವಾಗಿರುತ್ತದೆ. ಪ್ರತಿ ವರ್ಷವೂ ಅಗತ್ಯವಿರುವ ಮಕ್ಕಳಿಗೆ ನೀಡಲಾಗುತ್ತದೆ ಎಂದರು.

ಯುವ ಬೆಂಗಳೂರು ಟ್ರಸ್ಟ್ ಕಾರ್ಯದರ್ಶಿ ಶ್ವೇತ ಅವರು ಮಾತನಾಡಿ ಯುವ ಬೆಂಗಳೂರು ಟ್ರಸ್ಟ್ ಕಳೆದ 14 ವರ್ಷಗಳಿಂದ ಸರಕಾರಿ ಶಾಲೆಗಳ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದೆ. ಮಾಗಡಿ, ರಾಮನಗರ, ಮಂಡ್ಯ, ತುಮಕೂರು ಸೇರಿದಂತೆ 250ಕ್ಕೂ ಹೆಚ್ಚು ಗ್ರಾಮೀಣ ಸರಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡಿದೆ. ಸರಕಾರಿ ಶಾಲೆಗಳನ್ನು ಒಂದು ಮಾದರಿ ಶಾಲೆಗಳನ್ನಾಗಿ ಮಾಡುವ ಉದ್ದೇಶ ಹೊಂದಿದೆ. ಆ ನಿಟ್ಟಿನಲ್ಲಿ ಮಕ್ಕಳಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತಿದೆ. ಪ್ರತಿ ವರ್ಷ ಸರಕಾರಿ ಶಾಲಾ ಮಕ್ಕಳಿಗೆ ಸ್ಕೂಲ್ ಬ್ಯಾಗ್, ನೋಟ್ ಪುಸ್ತಕ, ಪಠ್ಯ ಪುಸ್ತಕ, ಸಮವಸ್ತ್ರ, ಡೆಸ್ಕ್, ಚಳಿಗಾಲದಲ್ಲಿ ಸ್ವೆಟರ್, ಆಟೋಪಕರಣ, ಪಿಠೋಪಕರಣ, ವಾಟರ್ ಫಿಲ್ಟರ್ ಹಾಗೂ ಶಾಲೆಗೆ ಬೇಕಾದಂತಹ ಮೂಲಭೂತ ಸೌಕರ್ಯಳನ್ನು ಒದಗಿಸುತ್ತಾ ಬಂದಿದೆ. ಹಾಗೂ ಹಲವಾರು ಅಂಗನವಾಡಿಗಳ ಅಭಿವೃದ್ಧಿಗೂ ಕೈಜೋಡಿಸುತ್ತಾ ಬಂದಿದೆ ಎಂದರು.

ಕಾರ್ಯಕ್ರಮದಲ್ಲಿ ಬಿಆರ್‌ಸಿ ಕುಮಾರ್, ನರೇಂದ್ರಕುಮಾರ್, ಕಳ್ಳಂಬೆಳ್ಳ ಶಾಲೆಯ ಮುಖ್ಯ ಶಿಕ್ಷಕ ಅನಿಲ್, ಯುವ ಬೆಂಗಳೂರು ಟ್ರಸ್ಟಿಗಳಾದ ಸುನಿಲ್, ಪ್ರವೀಣ್, ನಂದೀಶ್, ಎಸ್.ಡಿ.ಎಂ.ಸಿ. ಅಧ್ಯಕ್ಷ ಚಂದ್ರಶೇಖರ್, ರಾಜಣ್ಣ ಸೇರಿದಂತೆ ಹಲವರು ಹಾಜರಿದ್ದರು.

---

# ಶಾಲೆಗೆ ಸ್ಮಾರ್ಟ್ ಬೋರ್ಡ್ ವಿತರಣೆ

**ತಿಪಟೂರು:** ತಾಲೂಕಿನ ನೊಣವಿನಕೆರೆಯ ಕೆಪಿಎಸ್ ಪ್ರಾಥಮಿಕ ಶಾಲೆಗೆ ಬೆಂಗಳೂರಿನ ಸಂಸ್ಥೆಯಾದ ಯುವ ಬೆಂಗಳೂರು ಟ್ರಸ್ಟ್ ವತಿಯಿಂದ ಸ್ಮಾರ್ಟ್ ಬೋರ್ಡ್ ವಿತರಣೆ ಮಾಡಲಾಯಿತು.




ಇದೊಂದು ಸರ್ಕಾರೇತರ ಸಂಸ್ಥೆಯಾಗಿದ್ದು, ಕರ್ನಾಟಕ ರಾಜ್ಯಾದ್ಯಂತ ಸರ್ಕಾರಿ ಶಾಲೆಗಳ ಶ್ರೇಯೋಭಿವೃದ್ಧಿಗಾಗಿ ಸತತವಾಗಿ ಸುಮಾರು 12 ವರ್ಷಗಳಿಂದ ಶ್ರಮಿಸುತ್ತಿದೆ. ಸರ್ಕಾರಿ ಶಾಲೆಗಳ ಗುಣಮಟ್ಟ ಹೆಚ್ಚಿಸಲು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಉಚಿತ ನೋಟ್ ಬುಕ್ ವಿತರಣೆ, ಸ್ಪೋಕನ್ ಇಂಗ್ಲೀಷ್ ಕ್ಲಾಸ್, ಸ್ಮಾರ್ಟ್ ಬೋರ್ಡ್ ವಿತರಣೆ ಮುಂತಾದ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ.

ನೊಣವಿನಕೆರೆ ಶಾಲೆಯ ಸ್ಮಾರ್ಟ್ ಬೋರ್ಡ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಈ ಟ್ರಸ್ಟ್‌ನ ಸಂಸ್ಥಾಪಕ ಕಿರಣ್‌ಸಾಗರ್, ಯುವ ಬೆಂಗಳೂರು ಟ್ರಸ್ಟ್‌ನ ಸಂತೋಷ್ ಮತ್ತು ತೇಜಸ್ ಹಿರಿಯ ಶಿಕ್ಷಕಿ ಕವಿತಾ, ಅಭಿಲಾಷ, ರಮೇಶ್, ಹೇಮಲತಾ, ರೋಜಾ, ಅರ್ಪಿತಾ ಹಾಜರಿದ್ದರು.

---

# ಸರ್ಕಾರಿ ಶಾಲೆ, ವಿದ್ಯಾರ್ಥಿಗಳ ಅಭಿವೃದ್ಧಿಪಡಿಸುವುದೇ ಯುವ ಬೆಂಗಳೂರು ಟ್ರಸ್ಟ್ ಉದ್ದೇಶ: ಜಿ.ಕಿರಣ್ ಸಾಗರ್



ಶಿರಾ: ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಹಾಗೂ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಯುವ ಬೆಂಗಳೂರು ಟ್ರಸ್ಟ್ 2008ರಲ್ಲಿ ಸ್ಥಾಪನೆಯಾಗಿ ಸರ್ಕಾರಿ ಶಾಲೆಗಳನ್ನು ಪರಿವರ್ತಿಸುವ ಮತ್ತು ಮಕ್ಕಳು ಮತ್ತು ಯುವಕರನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ ಸ್ಥಾಪಿಸಿದ ಸಂಸ್ಥೆಯಾಗಿದೆ ಎಂದು ಯುವ ಬೆಂಗಳೂರು ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರಾದ ಜಿ.ಕಿರಣ್ ಸಾಗರ್ ಹೇಳಿದರು.

ಅವರು ನಗರದ ಸರ್ಕಾರಿ ಬಾಲಕಿಯರ ಪ.ಪೂ. ಕಾಲೇಜಿನ ಪ್ರೌಢಶಾಲಾ ವಿಭಾಗಕ್ಕೆ ಯುವ ಬೆಂಗಳೂರು ಟ್ರಸ್ಟ್ ವತಿಯಿಂದ ಸುಮಾರು 2.80 ಲಕ್ಷ ವೆಚ್ಚದ ಸ್ಮಾರ್ಟ್ ಬೋರ್ಡ್ ವಿತರಣೆ ಮಾಡಿ ಮಾತನಾಡಿದರು. ಯುವ ಬೆಂಗಳೂರು ಟ್ರಸ್ಟ್‌ನಿಂದ 2023 ರ ಮಾರ್ಚ್‌ನಲ್ಲಿ ತುಮಕೂರು, ಮಧುಗಿರಿ, ಕೋಲಾರ ಮತ್ತು ರಾಮನಗರ ಜಿಲ್ಲೆಗಳಲ್ಲಿ 10 ಸ್ಮಾರ್ಟ್ ಕ್ಲಾಸ್‌ಗಳನ್ನು ಸ್ಥಾಪಿಸಿ ಸ್ಮಾರ್ಟ್ ಬೋರ್ಡ್‌ಗಳನ್ನು ವಿತರಿಸಲಾಗಿದೆ. ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದ ಅವಧಿಯಲ್ಲಿ ಮನಸ್ಸಿಟ್ಟು ಓದಿದರೆ ಯಶಸ್ಸು ಗಳಿಸಬಹುದು, ವಿದ್ಯಾರ್ಥಿಗಳು ಕಷ್ಟಕ್ಕೆ ಹೆದರಬಾರದು ಅವುಗಳನ್ನು ಎದುರಿಸಿ ಮುನ್ನಡೆಯಬೇಕು. ಸರ್ಕಾರಿ ಶಾಲೆಗಳಲ್ಲಿ ಉತ್ತಮ ಶಿಕ್ಷಣ ಸಿಗುತ್ತದೆ. ಸರ್ಕಾರಿ ಶಾಲೆಗಳಲ್ಲಿ ಸಿಗುವಷ್ಟು ಉತ್ತಮ ವಿದ್ಯಾಭ್ಯಾಸ ಬೇರೆಲ್ಲೂ ಸಿಗುವುದಿಲ್ಲ. ಈ ದೇಶದಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಿ ಉನ್ನತ ಹುದ್ದೆ ಪಡೆದವರೆಲ್ಲರೂ ಸರ್ಕಾರಿ ಶಾಲೆಯಲ್ಲಿಯೇ ಓದಿದವರು. ಸರ್ಕಾರಿ ಶಾಲೆಯಲ್ಲಿ ಓದುತ್ತಿರುವುದಕ್ಕೆ ಹೆಮ್ಮೆ ಪಡಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣಪ್ಪ ಅವರು ಮಾತನಾಡಿ ಸರ್ಕಾರಿ ಶಾಲೆಗಳಲ್ಲಿ ಉತ್ತಮ ಶಿಕ್ಷಣ ದೊರಕುತ್ತಿದೆ. ಈ ನಿಟ್ಟಿನಲ್ಲಿ ಶಿರಾ ತಾಲ್ಲೂಕಿಗೆ ಅಕ್ಕಪಕ್ಕದ ತಾಲ್ಲೂಕಿನಿಂದಲೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೆ ಬರುತ್ತಾರೆ. ಮುಂದಿನ ದಿನಗಳಲ್ಲಿ ಶಿರಾ ತಾಲ್ಲೂಕನ್ನು ಶಿಕ್ಷಣ ಕಾಶಿ ಮಾಡಬೇಕೆಂಬುದು ನಮ್ಮೆಲ್ಲೆ ಆಶಯವಾಗಿದೆ. ಆದ್ದರಿಂದ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಲು ಸಂಘ ಸಂಸ್ಥೆಗಳ ಸಹಕಾರ ಅಗತ್ಯವಾಗಿದೆ. ಅಂತಹ ಕೆಲಸವನ್ನು ಯುವ ಬೆಂಗಳೂರು ಟ್ರಸ್ಟ್ ವತಿಯಿಂದ ಮಾಡುತ್ತಿರುವುದು ಶ್ಲಾಘನೀಯ, ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ, ಬ್ಯಾಗ್, ಸ್ಮಾರ್ಟ್ ಬೋರ್ಡ್ ಸೇರಿದಂತೆ ವಿವಿಧ ರೀತಿಯಲ್ಲಿ ಅನುಕೂಲ ಮಾಡುತ್ತಿರುವ ಟ್ರಸ್ಟ್ ಕಾರ್ಯ ಮೆಚ್ಚುವಂತಹದ್ದು ಎಂದರು.

ಕಾರ್ಯಕ್ರಮದಲ್ಲಿ ಸರ್ಕಾರಿ ಬಾಲಕಿಯರ ಪ.ಪೂ. ಕಾಲೇಜಿನ ಪ್ರಾಂಶುಪಾಲ ಚಂದ್ರಯ್ಯ, ಉಪ ಪ್ರಾಂಶುಪಾಲ ಅಣ್ಣೇಶ್, ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಸಿದ್ದೇಶ್ವರ್, ಯುವ ಬೆಂಗಳೂರು ಟ್ರಸ್‌ನ ಕಾರ್ಯದರ್ಶಿ ಶ್ವೇತಾ ಎಸ್ ರಾವ್, ಟ್ರಸ್ಟಿಗಳಾದ ಸುನಿಲ್.ಬಿ.ವಿ, ಅಶೋಕ್, ಪ್ರವೀಣ್, ಶಿಕ್ಷರಾದ ಶಿವರಾಮ್, ಮಂಜಪ್ಪ.ಪಿ, ಬಸವರಾಜು, ಗೋವಿಂದಪ್ಪ, ಸವಿತ.ಡಿ, ರತ್ನಮ್ಮ, ಜಯಕುಂದ್ರಾಳ್, ನೀಲಮ್ಮ, ಉಷಾ, ರಾಜಣ್ಣ, ಹೇಮಲತಾ, ಧನಲಕ್ಷ್ಮಿ, ಪಾರ್ವತಮ್ಮ, ಸುಜಾತ, ಸುಮಿತ್ರ ಸೇರಿದಂತೆ ಹಲವರು ಹಾಜರಿದ್ದರು.

## ಯುವ ಬೆಂಗಳೂರು ಟ್ರಸ್ಟ್‌ನಿಂದ ಮಾದರಿ ಕಾರ್ಯ

# 117 ಶಾಲೆ ಮಕ್ಕಳಿಗೆ ಸ್ವೆಟರ್ ಕೊಡುಗೆ

■ ವಿಜಯವಾಣಿ ಸುದ್ದಿಜಾಲ ಮಾಗಡಿ

ಸಹಕಾರ ನೀಡಿದರೆ ಸರ್ಕಾರಿ ಶಾಲೆ ಅಭಿವೃದ್ಧಿಗೆ ಸೌಲಭ್ಯ ನೀಡಲು ಸಿದ್ಧರಿದ್ದು, ಶಿಕ್ಷಕರು ಪ್ರಯೋಜನ ಪಡೆದುಕೊಳ್ಳುವಂತೆ ಯುವ ಬೆಂಗಳೂರು ಟ್ರಸ್ಟ್‌ನ ಸಂಸ್ಥಾಪಕ ಜಿ.ಕಿರಣ್ ಕರೆ ನೀಡಿದರು.

ತಾಲೂಕಿನ ಹನುಮಾಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ 117 ಶಾಲೆ ಮಕ್ಕಳಿಗೆ ಉಚಿತ ಸ್ವೆಟರ್ ವಿತರಿಸಿ ಮಾತನಾಡಿದರು.

» ಸರ್ಕಾರಿ ಶಾಲೆ ಅಭಿವೃದ್ಧಿಗೆ ಕ್ರಮ

» ವಿವಿಧ ಸೌಲಭ್ಯ ಒದಗಿಸಲು ಯೋಜನೆ

ಸರ್ಕಾರ ಪ್ರತಿವರ್ಷ ಶಾಲೆಗಳ ಅಭಿವೃದ್ಧಿಗೆ 16 ಸಾವಿರ ಕೋಟಿ ರೂ. ಮೀಸಲಿಡುತ್ತಿದ್ದು, ಇದರಲ್ಲಿ 12 ಸಾವಿರ ಕೋಟಿ ರೂ. ಸಂಬಳ, ಪಿಂಚಣಿಗೆ ಬಳಕೆಯಾಗುತ್ತಿದೆ. ಕ್ಷೀರ ಭಾಗ್ಯಕ್ಕೆ 400 ಕೋಟಿ ಹಾಗೂ ಸಮವಸ್ತ್ರಕ್ಕೆ 700 ಕೋಟಿ ರೂ. ಬಳಕೆಯಾಗುತ್ತಿದೆ. ಸರ್ಕಾರ ಶಾಲೆಗಳ ಅಭಿವೃದ್ಧಿಗೆ ಎನ್‌ಜಿಒ, ಕಾರ್ಪೋರೇಟ್ ಸಂಸ್ಥೆಗಳ ನೆರವನ್ನು ಪಡೆಯುತ್ತಿದ್ದು, ನಾವು ಕೂಡ ಸರ್ಕಾರಿ ಶಾಲೆ ಉಳಿಸುವ ನಿಟ್ಟಿನಲ್ಲಿ ಟ್ರಸ್ಟ್‌ನಿಂದ 2008ರಿಂದಲೇ ಬೆಂಗಳೂರು ನಗರದ ಸರ್ಕಾರಿ ಶಾಲೆಗಳಿಗೆ ಉಚಿತ ಹಾಲು ಪೂರೈಸುತ್ತಿದ್ದೇವೆ ಎಂದರು.

ಮಾಗಡಿ ತಾಲೂಕಿನಲ್ಲಿ 117ಕ್ಕೂ ಹೆಚ್ಚು ಶಾಲೆಗಳಿಗೆ ವಿವಿಧ ನೆರವು ನೀಡುತ್ತಿದ್ದೇವೆ, ಶಿಕ್ಷಕರು ಅಗತ್ಯವಾಗಿ ಬೇಕಾಗಿರುವ ವಸ್ತುಗಳನ್ನು ತಿಳಿಸಿದರೆ ಅದನ್ನು ಪೂರೈಸಲು ಬದ್ಧರಾಗಿದ್ದೇವೆ. ಅತೀ ಶೀಘ್ರದಲ್ಲೇ 117 ಶಾಲೆಗಳಿಗೂ ಸೊಳ್ಳೆ ಪರದೆ ನೀಡುತ್ತೇವೆ ಎಂದು ತಿಳಿಸಿದರು.

ಶಿಕ್ಷಕ ಪತಿಗೌಡ ಮಾತನಾಡಿ, ಯುವ ಬೆಂಗಳೂರು ಟ್ರಸ್ಟ್ ಮಾಡುತ್ತಿರುವ ಕಾರ್ಯ ಶ್ಲಾಘನೀಯವಾಗಿದೆ. ತಾಲೂಕಿನಲ್ಲಿ 117 ಶಾಲೆಯ 400ಕ್ಕೂ ಹೆಚ್ಚು ಮಕ್ಕಳಿಗೆ ಉಚಿತ ಸ್ವೆಟರ್ ನೀಡಿದ್ದಾರೆ. ಚಳಿಗಾಲದಲ್ಲಿ ವಿದ್ಯಾರ್ಥಿಗಳಿಗೆ ಇದರಿಂದ ಅನುಕೂಲವಾಗುತ್ತದೆ ಎಂದರು. ಟ್ರಸ್ಟ್‌ನ ಕಾರ್ಯದರ್ಶಿ ಸವಿತಾ ಎಸ್. ರಾವ್ ಮಾತನಾಡಿ, ಯುವ ಬೆಂಗಳೂರು ಟ್ರಸ್ಟ್‌ನಲ್ಲಿ 12 ಸಾವಿರ ಸದಸ್ಯರು ಕೆಲಸ ಮಾಡುತ್ತಿದ್ದು, ಸರ್ಕಾರಿ ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡಲಾಗುತ್ತಿದೆ, ಎಪಿಜೆ ಅಬ್ದುಲ್ ಕಲಾಂ ಪ್ರೇರಣೆಯಿಂದ ಸಂಸ್ಥೆ ಪ್ರಾರಂಭವಾಗಿದ್ದು, ಸರ್ಕಾರಿ ಶಾಲೆ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯುವಂತಾಗಬೇಕು ಆ ನಿಟ್ಟಿನಲ್ಲಿ ಟ್ರಸ್ಟ್ ಕಾರ್ಯ ನಿರ್ವಹಿಸುತ್ತಿದೆ ಎಂದರು.

ಟ್ರಸ್ಟ್‌ನ ಸದಸ್ಯ ಅಶೋಕ್, ಶಿಕ್ಷಕರಾದ ಬಸವರಾಜು, ಮುನಿಯಪ್ಪ ಮತ್ತಿತರರು ಭಾಗವಹಿಸಿದ್ದರು.

---

ಗೋಪಿ, ಕಾಂಗ್ರೆಸ್ ಮುಖಂಡ ಮಂಗಾಡಹಳ್ಳಿ ರಾಜಣ್ಣ ಮತ್ತಿತರರಿದ್ದರು. | ಶಿಕ್ಷಕರಾಗಿ ನಿವೃತ್ತರಾದ ಹಿನ್ನೆಲೆಯಲ್ಲಿ ಶನಿವಾರ ಶಾಲೆಯ ಮಕ್ಕಳಿಗೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಎಲ್ಲ ಶಿಕ್ಷಕರು ಮಂಜುನಾಥ್, ಶಿವಣ್ಣ ಮತ್ತಿತರರಿದ್ದರು.

# ಎಲ್ಲರಿಗೂ ಶಿಕ್ಷಣ ಸಿಕ್ಕಾಗ ದೇಶ ಸಮೃದ್ಧಿ



ಮಾಗಡಿ ಪಟ್ಟಣದ ಜಿಕೆಬಿಎಂಎಸ್ ಶಾಲಾ ಮಕ್ಕಳಿಗೆ ಯುವ ಬೆಂಗಳೂರು ಟ್ರಸ್ಟ್ ವತಿಯಿಂದ ಉಚಿತ ಶೈಕ್ಷಣಿಕ ಸಾಮಗ್ರಿಗಳನ್ನು ಟ್ರಸ್ಟ್ ಸಂಸ್ಥಾಪಕ ಕಿರಣ್, ಬಿಇಒ ಸಿದ್ದೇಶ್ವರ್ ವಿತರಿಸಿದರು. ಜಿಕೆಬಿಎಂಎಸ್ ಶಾಲೆ ಮುಖ್ಯಶಿಕ್ಷಕಿ ನುಸತ್ ತಬಸುಮ್, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಎಚ್.ಲೋಕೇಶ್, ಮಧುಗಿರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅನಿಲ್ ಕುಮಾರ್, ಶಿಕ್ಷಕ ಜಯರಾಂ, ಪತಿಗೌಡ, ಮಧುಗಿರಿ ಗೌಡ, ಮುನಿಯಪ್ಪ ಮತ್ತಿತರರಿದ್ದರು.

■ ವಿಜಯವಾಣಿ ಸುದ್ದಿಜಾಲ ಮಾಗಡಿ

ಬಡವರಿಗೆ ಸುಲಭವಾಗಿ ವೈದ್ಯಕೀಯ ಹಾಗೂ ಶಿಕ್ಷಣ ಸಿಕ್ಕಾಗ ಮಾತ್ರ ದೇಶ ಸಮೃದ್ಧಿಯಾಗಲು ಸಾಧ್ಯ. ಆದರೆ ಭಾರತದಲ್ಲಿ ಇವೆರಡೂ ಬಡವರಿಗೆ ಸಿಗದಿರುವುದು ವಿಷಾದನೀಯ ಎಂದು ಯುವ ಬೆಂಗಳೂರು ಟ್ರಸ್ಟ್ ಸಂಸ್ಥಾಪಕ ಜಿ.ಕಿರಣ್ ಸಾಗರ್ ಹೇಳಿದರು.

» ಯುವ ಬೆಂಗಳೂರು ಟ್ರಸ್ಟ್ ಸಂಸ್ಥಾಪಕ ಕಿರಣ್ ಸಾಗರ್ ಹೇಳಿಕೆ

ಪಟ್ಟಣದ ಜಿಕೆಬಿಎಂಎಸ್ ಶಾಲಾ ಆವರಣದಲ್ಲಿ ಯುವ ಬೆಂಗಳೂರು ಟ್ರಸ್ಟ್ ವತಿಯಿಂದ ಮಾಗಡಿ ತಾಲೂಕಿನ 135 ಸರ್ಕಾರಿ ಶಾಲೆಗಳಿಗೆ ಉಚಿತ ಶೈಕ್ಷಣಿಕ ಸಾಮಗ್ರಿ ವಿತರಿಸಿ ಮಾತನಾಡಿದರು.

ಗುಣಮಟ್ಟದ ಶಿಕ್ಷಣ ಸಿಕ್ಕಾಗ ಮಾತ್ರ ಉತ್ತಮ ಪ್ರಜೆಯಾಗಿ ರೂಪುಗೊಳ್ಳಲು ಸಾಧ್ಯ. ಆದರೆ ಇಂದು ಬಡವರಿಗೆ ಆಶ್ರಯವಾಗಿರುವ ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡಬೇಕಾಗಿದೆ ಎಂದರು.

ಬಿಇಒ ಸಿದ್ದೇಶ್ವರ್ ಮಾತನಾಡಿ, ಹೃದಯವಂತಿಕೆ ಇದ್ದವರು ಮಾತ್ರ ದಾನ ಮಾಡಲು ಮುಂದಾಗುತ್ತಾರೆ. ಕಳೆದ ಸಾಲಿನಲ್ಲಿ ಮಾಗಡಿ ತಾಲೂಕಿನಲ್ಲಿ ಅತೀ ಹೆಚ್ಚು ಪ್ರತಿಭಾ ಪುರಸ್ಕಾರ ಪ್ರಶಸ್ತಿಗಳು ಬಂದಿವೆ. ಆಟೋಟ, ಎಸ್‌ಎಸ್‌ಎಲ್‌ಸಿ ಫಲಿತಾಂಶ, ಮಳೆ ಬಿದ್ದಿರುವ ಸರಾಸರಿಯಲ್ಲೂ ಜಿಲ್ಲೆಯಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಬಂದಿದೆ. ಈ ವರ್ಷ ಆಂಗ್ಲ ಮಾಧ್ಯಮಕ್ಕೆ ಉತ್ತಮ ಸ್ಪಂದನೆ ಸಿಕ್ಕಿದ್ದು, ಖಾಸಗಿ ಶಾಲೆಯಲ್ಲಿ ಓದಿದರೆ ಬುದ್ಧಿವಂತರಾಗುತ್ತಾರೆ ಎಂಬ ಭ್ರಮೆ ಬಿಡಬೇಕೆಂದು ಪಾಲಕರಲ್ಲಿ ಮನವಿ ಮಾಡಿದರು.

ಟ್ರಸ್ಟ್ ಉಪಾಧ್ಯಕ್ಷ ಸುನೀಲ್ ಮಾತನಾಡಿ, ಸರ್ಕಾರಿ ಶಾಲೆ ಉಳಿಸುವ ಪ್ರಯತ್ನ ಮಾಡಿದ ನಾವು ಈಗ ಮಾದರಿ ಶಾಲೆಯಾಗಿ ಮಾಡುವ ಗುರಿ ಇಟ್ಟುಕೊಂಡಿದ್ದೇವೆ. ಉತ್ತಮ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈ ಜೋಡಿಸೋಣ ಎಂದರು.

> ಸರ್ಕಾರಿ ಶಾಲೆಗಳ ಹಾಗೂ ಬಡ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು ಏಳು ವರ್ಷದ ಹಿಂದೆ ಒಂದೆ ಶಾಲೆಗೆ ಶೈಕ್ಷಣಿಕ ಸಾಮಗ್ರಿ ವಿತರಣೆ ಮಾಡಲು ಶುರು ಮಾಡಿದೆವು. ಇಂದು 135 ಶಾಲೆಗಳಿಗೆ ಡೆಸ್ಕ್, ವಿಜ್ಞಾನ ಪರಿಕರ, ಶುದ್ಧ ನೀರಿನ ಘಟಕ, ಕ್ರೀಡಾ ಪರಿಕರ, ಕಂಪ್ಯೂಟರ್ ಆಧಾರಿತ ಸ್ಮಾರ್ಟ್ ಕ್ಲಾಸ್ ಯೋಜನೆ ನೀಡುತ್ತಿದ್ದೇವೆ. ತಾಲೂಕಿನಲ್ಲಿ ಉತ್ತಮ ಸ್ಪಂದನೆ ಬಂದಿದ್ದು, ಈ ವರ್ಷದಿಂದಲೇ 150 ಶಾಲೆ ಗುರಿ ಮುಟ್ಟುವ ಕೆಲಸ ಮಾಡಲಾಗುವುದು.
>
> | ಜಿ.ಕಿರಣ್ ಸಾಗರ್
> ಯುವ ಬೆಂಗಳೂರು ಟ್ರಸ್ಟ್ ಸಂಸ್ಥಾಪಕ

# ಖಾಸಗಿ ಶಾಲೇಲಿ ಓದಿದವರು ಮಾತ್ರ ಬುದ್ಧಿವಂತರಲ್ಲ



ಮಾಗಡಿ ತಾಲೂಕಿನ ಚಕ್ರಬಾವಿ ಶಾಲಾ ಮಕ್ಕಳಿಗೆ ಯುವ ಬೆಂಗಳೂರು ಟ್ರಸ್ಟ್ ವತಿಯಿಂದ ಉಚಿತ ಬ್ಯಾಗ್ ಮತ್ತು ಶೈಕ್ಷಣಿಕ ಸಾಮಾಗ್ರಿಯನ್ನು ಸಂಸ್ಥಾಪಕ ಅಧ್ಯಕ್ಷ ಕಿರಣ್ ಸಾಗರ್ ವಿತರಣೆ ಮಾಡಿದರು, ಶಾಲಾ ಮುಖ್ಯಶಿಕ್ಷಕರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

■ ವಿಜಯವಾಣಿ ಸುದ್ದಿಜಾಲ ಮಾಗಡಿ

ಖಾಸಗಿ ಶಾಲೆಯಲ್ಲಿ ಓದಿದವರು ಮಾತ್ರ ಬುದ್ಧಿವಂತರು ಎಂಬ ಕಲ್ಪನೆ ಬಿಡಬೇಕು, ಸರ್ಕಾರಿ ಶಾಲೆ ಮಕ್ಕಳೂ ಬುದ್ಧಿವಂತದ್ದಾರೆ ಎಂದು ಯುವ ಬೆಂಗಳೂರು ಟ್ರಸ್ಟ್‌ನ ಸಂಸ್ಥಾಪಕ ಜಿ.ಕಿರಣ್ ಸಾಗರ್ ಹೇಳಿದರು.

ತಾಲೂಕಿನ ಚಕ್ರಬಾವಿಯ ಶತಮಾನದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಮಕ್ಕಳಿಗೆ ಟ್ರಸ್ಟ್ ವತಿಯಿಂದ ಉಚಿತ ಬ್ಯಾಗ್, ನೋಟ್ ಪುಸ್ತಕ, ಶೈಕ್ಷಣಿಕ ಸಾಮಗ್ರಿ ವಿತರಿಸಿ ಮಾತನಾಡಿ, ಸರ್ಕಾರಿ ಶಾಲೆಗಳೂ ಖಾಸಗಿ ಶಾಲೆಗಳ ಪೈಪೋಟಿ ಎದುರಿಸುವಂತಾಗಬೇಕು. ಈ ನಿಟ್ಟಿನಲ್ಲಿ ಸರ್ಕಾರಿ ಶಾಲೆಗಳಿಗೆ ಟ್ರಸ್ಟ್ ವತಿಯಿಂದ ಡೆಸ್ಕ್, ಕಲಿಕಾ ಸಾಮಗ್ರಿ, ವಿಜ್ಞಾನ ಪರಿಕರಗಳು, ಶುದ್ಧ ನೀರು ಘಟಕ, ಕ್ರೀಡಾ ಪರಿಕರಗಳನ್ನು ಕಂಪ್ಯೂಟರ್ ಆಧಾರಿತ ಸ್ಮಾರ್ಟ್ ಕ್ಲಾಸ್ ಯೋಜನೆಗಳನ್ನು ನೀಡಲಾಗುತ್ತಿದೆ. ಸತತ 7 ವರ್ಷಗಳಿಂದ ಈ ಕಾರ್ಯ ಮಾಡುತ್ತಿರುವ ಟ್ರಸ್ಟ್ ಇದುವರೆಗೆ ಸುಮಾರು 135 ಶಾಲೆಗಳಿಗೆ ನೆರವು ನೀಡಿದೆ ಎಂದರು.

ಟ್ರಸ್ಟ್‌ನ ಉಪಾಧ್ಯಕ್ಷ ಸುನೀಲ್ ಮಾತನಾಡಿ, ಸರ್ಕಾರಿ ಶಾಲೆ ಉಳಿಸುವ ನಿಟ್ಟಿನಲ್ಲಿ ಟ್ರಸ್ಟ್ ಪ್ರಯತ್ನ ಮಾಡುತ್ತಿದ್ದು, ಮಾದರಿ ಶಾಲೆಗಳನ್ನಾಗಿಸುವ ಗುರಿ ಹೊಂದಿದೆ ಎಂದು ತಿಳಿಸಿದರು.

ಶಿಕ್ಷಕ ರವಿ ಮಾತನಾಡಿ, ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ಸಾಮಗ್ರಿ ನೀಡುತ್ತಿರುವ ಟ್ರಸ್ಟ್‌ನ ಕಾರ್ಯ ಶ್ಲಾಘನೀಯ. ಪಾಲಕರು ಖಾಸಗಿ ಶಾಲೆ ವ್ಯಾಮೋಹ ಬಿಡಬೇಕೆಂದು ಮನವಿ ಮಾಡಿದರು.

ಎಸ್‌ಡಿಎಂಸಿ ಅಧ್ಯಕ್ಷ ನರಸಿಂಹಮೂರ್ತಿ, ಮುಖ್ಯಶಿಕ್ಷಕ ಮಲ್ಲೇಶ್, ಶಿಕ್ಷಕರಾದ ವೆಂಕಟೇಶ್, ಗ್ರಾಮದ ಮುಖಂಡರಾದ ಸಿ.ಎಚ್.ಬೈರೇಶ್, ದೇವರಾಜು, ಸಿ.ಎನ್ .ದೀಪಕ್, ಸಂತೋಷ್ ಮತ್ತಿತರರು ಇದ್ದರು.

# ವಿಶೇಷಚೇತನರಲ್ಲಿ ದೇವರನ್ನು ಕಾಣೆ ಎಂದಿದ್ದ ಕಲಾಂ

■ ವಿಕ ಸುದ್ದಿಲೋಕ ಮಾಗಡಿ

ವಿಶೇಷ ಚೇತನ ಮಕ್ಕಳನ್ನು ದೇವರಂತೆ ಕಾಣಬೇಕು, ಅವರನ್ನು ಕೂಡಾ ಸಮಾನವಾಗಿ ನೋಡಬೇಕೆಂದು ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಅವರು ಹೇಳುತ್ತಿದ್ದರು ಎಂದು ಯುವ ಬೆಂಗಳೂರು ಟ್ರಸ್ಟ್‌ನ ಅಧ್ಯಕ್ಷ ಕಿರಣ್ ಸಾಗರ್ ಹೇಳಿದರು.

ಪಟ್ಟಣದ ತಿರುಮಲೆ ಸರಕಾರಿ ಶಾಲೆಯಲ್ಲಿಡಾ.ಎಪಿಜೆ ಅಬ್ದುಲ್ ಕಲಾಂ ಅವರ 88ನೇ ಜನ್ಮ ದಿನಾಚರಣೆ ಪ್ರಯುಕ್ತ ವಿಶೇಷ ಚೇತನ ಮಕ್ಕಳಿಗೆ ಥೆರಪಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಡಾ.ಎಪಿಜೆ ಅಬ್ದುಲ್ ಕಲಾಂರವರು ವಿಶೇಷ ಚೇತನ ಮಕ್ಕಳನ್ನು ನಮ್ಮಂತೆಯೇ ನೋಡಬೇಕು. ಅವರು ಕೂಡಾ ವಿಶೇಷ ರೀತಿಯ ಮಕ್ಕಳಾಗಿದ್ದು ಅವರಿಗೆ ಕನಿಕರ ತೋರದೆ ನಮ್ಮಂತೆ ಕಾಣಬೇಕು ಎಂದು ಹೇಳುತ್ತಿದ್ದರು ಎಂದು ಹೇಳಿದರು.

ಇಂತಹ ಮಕ್ಕಳು ತಂದೆ ತಾಯಿ ಆಶ್ರಯದಲ್ಲೆ ಬೆಳೆಯುತ್ತಾರೆ. ಪೋಷಕರು ಇದನ್ನು ಶಾಪ ಎಂದು ತಿಳಿಯದೆ ಅವರ ಸೇವೆಗೆ ದಿನದಲ್ಲಿ ಒಂದು ಗಂಟೆ ಮೀಸಲಿಟ್ಟರೆ ಅವರು ಕೂಡಾ ನಮ್ಮಂತೆ ಆಗುತ್ತಾರೆ. ಯುವ ಬೆಂಗಳೂರು ಟ್ರಸ್ಟ್ ಮಕ್ಕಳ ಥೆರಪಿ ಮಾಡುವ ವೈದ್ಯರ ಖರ್ಚನ್ನು ಟ್ರಸ್ಟೇ ವಹಿಸಿಕೊಂಡಿದ್ದು ಕಳೆದ ನಾಲ್ಕು ತಿಂಗಳಿನಿಂದ ತರಬೇತಿ ಕಾರ್ಯಕ್ರಮ ನಡೆಯುತ್ತಿದೆ ಎಂದು ತಿಳಿಸಿದರು.

ಬಿಇಒ ಸಿದ್ದೇಶ್ವರ್ ಮಾತನಾಡಿ, ರಾಜ್ಯದಲ್ಲೇ ಪ್ರಥಮ ಬಾರಿಗೆ ಮಾಗಡಿಯಲ್ಲಿ ವಿಶೇಷಚೇತನ ಮಕ್ಕಳ ಥೆರಪಿ ಕಾರ್ಯಕ್ರಮ ನಡೆಯುತ್ತಿದೆ. ಸರಕಾರ ಈ ವರ್ಷದಿಂದ ಈ ಕಾರ್ಯಕ್ರಮಕ್ಕೆ ಹಣ ಬಿಡುಗಡೆ ಮಾಡಿಲ್ಲ, ಆದರೆ ಯುವ ಬೆಂಗಳೂರು ಟ್ರಸ್ಟ್ ವೈದ್ಯರ ಖರ್ಚನ್ನು ವಹಿಸಿಕೊಂಡಿರುವುದು ಶ್ಲಾಘನೀಯ. ಇಂತಹ ಮಕ್ಕಳಿಗೆ ತರಬೇತಿ ಅತೀ ಮುಖ್ಯವಾಗಿ ಬೇಕಾಗಿದೆ. ವಿಶೇಷ ಚೇತನ ಮಕ್ಕಳು ಸಾಕಷ್ಟು ಸಾಧನೆಯನ್ನು ಮಾಡಿದ್ದಾರೆ. ಇತ್ತೀಚೆಗಷ್ಟೆ ಅಂದ ಮಹಿಳೆ ಐಎಎಸ್ ಅಧಿಕಾರಿಯಾಗಿ ಸಾಧನೆ ಮಾಡಿದ ಮೊದಲ ದೃಷ್ಟಿವಿಶೇಷ ಚೇತನ ಮಹಿಳೆ ಪ್ರಾಂಜಲ್ ಪಾಟೀಲ್ ಆಗಿದ್ದು ಇದೇ ರೀತಿ ಸಾಕಷ್ಟು ಚೇತನರು ಸಾಧನೆ ಮಾಡಿದ್ದು ಇವರಿಗೆ ಪೋಷಕರು ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕೆಂದು ತಿಳಿಸಿದರು.

ಬಿಆರ್‌ಸಿ ರೂಪಾಕ್ಷಯ್ಯ ಮಾತನಾಡಿದರು.

ಮಕ್ಕಳಿಗೆ ತಾರಾ ಮಂಡಲದ ಸಮಗ್ರ ಮಾಹಿತಿ। ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ವಿವರಣೆ

# ಶಾಸಕರಿಂದ ಸಂಚಾರಿ ತಾರಾಲಯಕ್ಕೆ ಚಾಲನೆ

■ **ವಿಕ ಸುದ್ದಿಲೋಕ** ಮಾಗಡಿ

ಯುವ ಬೆಂಗಳೂರು ಟ್ರಸ್ಟ್ ಹಾಗೂ ಡೇರಿ ಡೇ ವತಿಯಿಂದ ಸರಕಾರಿ ಶಾಲಾ ಮಕ್ಕಳಿಗೆ ತಾರಾ ಮಂಡಲದ ಸಮಗ್ರ ಮಾಹಿತಿಯನ್ನು ನೀಡುವ ಸಂಚಾರಿ ತಾರಾಲಯಕ್ಕೆ ಶಾಸಕ ಎ. ಮಂಜುನಾಥ್ ಚಾಲನೆ ನೀಡಿದರು.

**ವಿಶೇಷತೆಗಳು** : ತಾರಾಲಯವನ್ನು 40 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿದ್ದು, 40 ರಿಂದ 45 ವಿದ್ಯಾರ್ಥಿಗಳಿಗೆ ಆಸನ ವ್ಯವಸ್ಥೆ, 360 ಡಿಗ್ರಿ ಪ್ರೊಜೆಕ್ಟರ್ ಮೂಲಕ ಕಾರ್ಯನಿರ್ವಹಿಸಲಿದೆ, ಕನ್ನಡ, ಇಂಗ್ಲೀಷ್ ಭಾಷೆಗಳಲ್ಲಿ ಬಾಹ್ಯಾಕಾಶ ವಿಷಯಗಳ ಪ್ರಸ್ತುತಿಯಾಗಿದೆ.

ತಾಲೂಕಿನ ಹುಲಿಕಟ್ಟೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಶಾಸಕ ಎ. ಮಂಜುನಾಥ್, ಬಿಇಒ ಸಿದ್ದೇಶ್ವರ್, ಯುವ ಬೆಂಗಳೂರು ಟ್ರಸ್ಟ್‌ನ ಕಾರ್ಯದರ್ಶಿ ಸುನೀಲ್ ಹಾಗೂ ಅವರ ತಂಡದಿಂದ ತಾರಾಲಯ ಪ್ರದರ್ಶನಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಯಿತು.

**ಟ್ರಸ್ಟ್ ಕಾರ್ಯ ಮೆಚ್ಚಿದ ಶಾಸಕ:**
ಸರಕಾರಿ ಶಾಲೆಗಳು ಉಳಿಯುವ ನಿಟ್ಟಿನಲ್ಲಿ ಯುವ ಬೆಂಗಳೂರು ಟ್ರಸ್ಟ್‌ನವರು ಕಳೆದ 8 ವರ್ಷಗಳಿಂದಲೂ ಮಾಗಡಿಯಲ್ಲಿ ನಿಕಟ ಬಾಂಧವ್ಯವನ್ನು ಬೆಳೆಸಿಕೊಂಡು ಸರಕಾರಿ ಶಾಲಾ ಮಕ್ಕಳಿಗೆ ಉಚಿತ ನೋಟ್ ಪುಸ್ತಕ ಕ್ರೀಡಾ ಸಾಮಾಗ್ರಿಗಳು ಶಾಲೆಗೆ ಬೇಕಾದ ಅಗತ್ಯ ವಸ್ತುಗಳನ್ನು ನೀಡುತ್ತಾ ಬಂದಿದ್ದು ಈಗ ತಾರಾ ಮಂಡಲ ಪರಿಚಯಿಸುವ 3ಡಿ ತಂತ್ರಜ್ಞಾನದ ಮೂಲಕ ಮಕ್ಕಳಿಗೆ ತಿಳಿಯುವಂತೆ ಪ್ರದರ್ಶನಗಳನ್ನು ಏರ್ಪಡಿಸುತ್ತಿರುವುದು ಸಂತೋಷದ ವಿಚಾರ ಎಂದು ಶಾಸಕ ಮಂಜುನಾಥ್ ಮೆಚ್ಚಿ ಮಾತನಾಡಿದರು.




**ಮಾಗಡಿ ತಾಲೂಕಿನ ಹುಲಿಕಟ್ಟೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಸಂಚಾರಿ ತಾರಾಲಯವನ್ನು ಶಾಸಕ ಎ.ಮಂಜುನಾಥ್ ಉದ್ಘಾಟಿಸಿದರು. ಬಿಇಒ ಸಿದ್ದೇಶ್ವರ್, ಪೂಜಾರಿ ಪಾಳ್ಯ ಕೃಷ್ಣಮೂರ್ತಿ, ಯುವ ಬೆಂಗಳೂರು ಟ್ರಸ್ಟ್‌ನ ಸುನೀಲ್ ಜೊತೆಯಲ್ಲಿದ್ದರು**

**ಮಕ್ಕಳಿಗೆ ಜ್ಞಾನ ನೀಡುವುದೇ ಉದ್ದೇಶ:**
ಯುವ ಬೆಂಗಳೂರು ಟ್ರಸ್ಟ್‌ನ ಕಾರ್ಯದರ್ಶಿ ಸುನೀಲ್ ಮಾತನಾಡಿ, ವಿದ್ಯಾರ್ಥಿಗಳಿಗೆ ಬಾಹ್ಯಾಕಾಶಕ್ಕೆ ಸಂಬಂಧಿಸಿದ ಮಾಹಿತಿ ಕಡಿಮೆ ಇದೆ, ಹೀಗಾಗಿ ಸರಕಾರಿ ಶಾಲೆಗಳನ್ನು ತಲುಪುವ ಉದ್ದೇಸದಿಂದ ಸಂಚಾರಿ ತಾರಾಲಯವನ್ನು ತಯಾರಿಸಲಾಗಿದೆ.ಮಾಗಡಿ ತಾಲೂಕಿನ ಎಲ್ಲಾ ಸರಕಾರಿ ಅನುದಾನಿತ ಶಾಲೆಗಳಲ್ಲಿ ಉಚಿತ ಪ್ರದರ್ಶಿಸಲಾಗುತ್ತದೆಂದು ತಿಳಿಸಿದರು.

**ದೃಶ್ಯ ರೂಪಕ ಮನಸ್ಸಿಗೆ ನಾಟುತ್ತದೆ:**
ರಾಜ್ಯದಲ್ಲಿ ಸದ್ಯ ಬೆಂಗಳೂರು, ಮಂಗಳೂರು ಹಾಗೂ ಬಳ್ಳಾರಿಯಲ್ಲಿ ಮಾತ್ರ ತಾರಾಲಯಗಳಿವೆ, ಬಳ್ಳಾರಿ ತಾರಾಲಯ ತಾತ್ಕಾಲಿಕವಾಗಿ ಸ್ಥಗಿತವಾಗಿದೆ, ತಾರಾಲಯ ವೀಕ್ಷಿಸಲು ವಿದ್ಯಾಥಿಗಳು 300 ರೂ. ರಿಂದ 400 ರೂ ಹಣ ವ್ಯಯಿಸಿ ಬೆಂಗಳೂರಿಗೆ ಬರಬೇಕಾದ ಸ್ಥಿತಿ ಇದೆ, ಈ ಸಮಸ್ಯೆ ತಪ್ಪಿಸಲು ವಿದ್ಯಾರ್ಥಿಗಳ ಸನಿಹವೇ ತಲುಪುವಂತೆ ಈ ಸಂಚಾರಿ ತಾರಾಲಯಕವನ್ನು ರೂಪಿಸಲಾಗಿದೆ.

ಬಾಹ್ಯಾಕಾಶದ ಬಗ್ಗೆ ಮಕ್ಕಳಿಗೆ ಪಾಠ ಕೇಳುವುದಕ್ಕಿಂತ ಅದನ್ನು ದೃಶ್ಯಗಳಲ್ಲಿ ತೋರಿಸಿದರೆ ಅವರ ಮನಸ್ಸಿಗೆ ನಾಟುತ್ತದೆ, ಹೀಗಾಗಿ ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತವಾಗಿ ತಾರಾಲಯದ ಮೂಲಕ ಬಾಹ್ಯಾಕಾಶ ವೀಕ್ಷಣೆಯ ಅವಕಾಶ ನೀಡುವ ಉದ್ದೇಶ ನಮ್ಮದು ಎಂದು ಸುನೀಲ್ ತಿಳಿಸಿದ್ದಾರೆ.

**31 ವಿಷಯಗಳ ಬಗ್ಗೆ ವಿವರಣೆ:**
ಇದಕ್ಕಾಗಿ ಬಾಹ್ಯಾಕಾಶಕ್ಕೆ ಸಂಬಂಧಿಸಿದ 31 ವಿಷಯಗಳ ಬಗ್ಗೆ ಮೂರು ಆಯಾಮಗಳ ಪ್ರಾತ್ಯಕ್ಷಿಕೆ (3ಡಿ) ತಂತ್ರಜ್ಞಾನದ ಮೂಲಕ ಸದ್ಧಪಡಿಸಿದ್ದೇವೆ. ಇದು ನರ್ಸರಿಯಿಂದ ದ್ವಿತೀಯ ಪಿಯುಸಿವರೆಗಿನ ವಿಜ್ಞಾನ ಪಠ್ಯಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒಳಗೊಂಡಿದೆ. ಕನ್ನಡ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ವಿದ್ಯಾರ್ಥಿಗಳ ಜೊತೆ ಮಾತನಾಡುವಂತೆ ಹಿನ್ನೆಲೆ ಧ್ವನಿ ಅಳವಡಿಸಲಾಗದೆ ಎಂದು ವಿವರಿಸಿದರು.

80 ಲಕ್ಷ ವಿದ್ಯಾರ್ಥಿಗಳನ್ನು ಮುಟ್ಟುವ ಗುರಿ:
ತಾರಾಲಯವನ್ನು 80 ಲಕ್ಷ ವಿದ್ಯಾರ್ಥಿಗಳಿಗೆ ತಲುಪಿಸುವ ಉದ್ದೇಶವಿದೆ. ಇದು ನೋಡಲು ಗುಮ್ಮಟ (ಡೋಮ್) ಆಕಾರದಲ್ಲಿದೆ ಎಂದರು. ಕಾರ್ಯಕ್ರಮದಲ್ಲಿ ಒಕ್ಕಲಿಗ ಸಂಘದ ನಿರ್ದೇಶಕ ಪೂಜಾರಿ ಪಾಳ್ಯ ಕೃಷ್ಣಮೂರ್ತಿ, ಬಿಇಒ ಸಿದ್ದೇಶ್ವರ್, ಮೊರಾರ್ಜಿ ದೇಸಾಯಿ ಶಾಲೆಯ ಮುಖ್ಯಶಿಕ್ಷಕ ಕೃಷ್ಣಮೂರ್ತಿ, ಯುವ ಬೆಂಗಳೂರು ಟ್ರಸ್ಟ್‌ನ ಪ್ರವೀಣ್, ಚೌರನಾತ್, ಹೇಮ ಸೇರಿದಂತೆ ಇತರರು ಭಾಗವಹಿಸಿದ್ದರು.

# ಪತ್ರಕರ್ತರಿಗೆ ಆರೋಗ್ಯ ಕಿಟ್ ವಿತರಣೆ



**ಮಾಗಡಿ** : ಯುವ ಬೆಂಗಳೂರು ಟ್ರಸ್ಟ್ ವತಿಯಿಂದ ಮಾಗಡಿ ತಾಲೂಕಿನ ಪತ್ರಕರ್ತರಿಗೆ ಆರೋಗ್ಯ ಕಿಟ್‌ನ್ನು ವಿತರಣೆ ಮಾಡಲಾಯಿತು.

ಪಟ್ಟಣದ ಸೋಮೇಶ್ವರ ದೇವಸ್ಥಾನದ ಆವರಣದಲ್ಲಿ ಯುವ ಬೆಂಗಳೂರು ಟ್ರಸ್ಟ್‌ನ ಉಪಾಧ್ಯಕ್ಷ ಸುನೀಲ್ ಮಾತನಾಡಿ, ಕೋರೊನ ಲಾಕ್ ಡೌನ್ ಸಮಯದಲ್ಲಿ ಪತ್ರಕರ್ತರು ತಮ್ಮ ಆರೋಗ್ಯವನ್ನು ಲೆಕ್ಕಿಸದೆ ಸುದ್ದಿಗಾಗಿ ಸಾಕಷ್ಟು ಓಡಾಡಿದ್ದಾರೆ. ಅವರಿಗೂ ಕೂಡ ಸುರಕ್ಷತೆ ಅತೀ ಮುಖ್ಯ ಈ ನಿಟ್ಟಿನಲ್ಲಿ ಯುವ ಬೆಂಗಳೂರು ಟ್ರಸ್ಟ್‌ನ ಅಧ್ಯಕ್ಷರಾದ ಕಿರಣ್ ಸಾಗರ್ ರವರು ಮಾಗಡಿ ತಾಲೂಕಿನ ಪತ್ರಕರ್ತರಿಗೆ ಆರೋಗ್ಯ ಕಿಟ್‌ನ್ನು ನೀಡಿದ್ದು ಇದರಲ್ಲಿ ಎನ್95 ಮಾಸ್ಕ್, ಗ್ಲೌಸ್, ಸ್ಯಾನಿಟೈಸರ್, ಫೇಸ್ ಶೀಲ್ಡ್, ವಿಟಮಿನ್ ಸಿ ಮಾತ್ರೆ, ಡೋಲೋ ಮಾತ್ರೆ ಒಳಗೊಂಡ ಕಿಟ್‌ನ್ನು ನೀಡಿ–ದ್ದು ಮುಂದಿನ ದಿನಗಳಲ್ಲಿ ಪತ್ರಕರ್ತರಿಗೆ ಇನ್ನಷ್ಟು ಅನುಕೂಲತೆಗಳನ್ನು ಯುವ ಬೆಂಗಳೂರು ಟ್ರಸ್ಟ್‌ನಿಂದ ಮಾಡಲಾಗುತ್ತದೆಂದು ತಿಳಿಸಿದರು.

ಲಾಕ್‌ಡೌನ್‌ನಲ್ಲಿ ಬಡವರಿಗೆ ಸೇವೆ : ಯುವ ಬೆಂಗಳೂರು ಟ್ರಸ್ಟ್ 11 ಸಾವಿರಕ್ಕೂ ಹೆಚ್ಚು ಸ್ವ–ಯಂ ಸೇವಕರನ್ನು ಒಳಗೊಂಡಿದ್ದು ಎಲ್ಲಾರೂ ಕೂಡ ಉನ್ನತ ಮಟ್ಟದ ಉದ್ಯೋಗದಲ್ಲೆ ಇದ್ದು ಲಾಕ್ ಡೌನ್ ಸಮಯದಲ್ಲಿ ಜನಗಳ ಪರವಾಗಿ ನಿಲ್ಲುವ ಕೆಲಸ ಮಾಡಿದ್ದು ಬೆಂಗಳೂರಿನಲ್ಲಿ 1200 ಕ್ಕೂ ಹೆಚ್ಚು ಮಂಗಳಮುಖಿಯವರಿಗೆ ದಿನಸಿ ಕಿಟ್ ನೀಡಲಾಗಿದೆ.ಲಾಕ್ ಡೌನ್ ಸಮಯದಲ್ಲಿ ಪ್ರತಿ ದಿನ 500 ಕ್ಕೂ ಹೆಚ್ಚು ಮಂದಿಗೆ ಊಟದ ವ್ಯವಸ್ಥೆಯನ್ನು ಮಾಡಿದ್ದು ಕಳೆದ 6 ವರ್ಷಗಳಿಂದ 150 ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಿಗೆ ಪ್ರತಿ ವರ್ಷವು ಸ್ಕೂಲ ಬ್ಯಾಗ್, ಪುಸ್ತಕ, ಶಾಲೆಗೆ ಬೇಕಾದ ಕಲಿಕ ಸಾಮಾಗ್ರಿಗಳು, ಕ್ರೀಡಾ ಸಾಮಾಗ್ರಿಗಳನ್ನು ವಿತರಣೆ ಮಾಡಿದ್ದು ಕಳೆದ ವರ್ಷ ಲಾಕ್ ಡೌನ್‌ನಿಂದ ಶಾಲೆ ಮುಚ್ಚಿದ ಕಾರಣ ಯಾವುದೇ ಸಾಮಾಗ್ರಿಗಳನ್ನು ನೀಡಲು ಆಗಿಲ್ಲ ಈ ವರ್ಷ ಶಾಲೆ ಆರಂಭವಾದ ಕೂಡಲೆ ಎಲ್ಲಾ ಮಕ್ಕಳಿಗೂ ಸ್ಕೂಲ್ ಕಿಟ್‌ಗಳನ್ನು ನೀಡುತ್ತೇವೆಂದು ಸುನೀಲ್ ತಿಳಿಸಿದರು.

ಪತ್ರಕರ್ತ ತಿರುಮಲೆ ಶ್ರೀನಿವಾಸ್ ಮಾತನಾಡಿ, ಯುವ ಬೆಂಗಳೂರು ಟ್ರಸ್ಟ್‌ನ ಸದಸ್ಯರುಗಳು ತಾವು ದುಡಿದ ಹಣದಲ್ಲಿ ಸರ್ಕಾರಿ ಶಾಲಾ ಮಕ್ಕಳಿಗೆ ಅನುಕೂಲವಾಗುವ ರೀತಿ ಕೆಲಸ ಮಾಡುತ್ತಿದ್ದಾರೆ, ಜೊತೆಗೆ ಕೊರೊನ ವಾರಿಯರ್ಸ್ ಆಗಿ ಸೇವೆ ಮಾಡುತ್ತಿರುವ ನಮಗೂಕೂಡ ಆರೋಗ್ಯ ಕಿಟ್ ಕೊಡುವ ಮೂಲಕ ಪತ್ರಕರ್ತರ ಸಹಾಯಕ್ಕೆ ನಿಂತಿರುವುದಕ್ಕೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಯುವ ಬೆಂಗಳೂರು ಟ್ರಸ್ಟ್‌ನ ಸ್ವ–ಯಂ ಸೇವಕರಾದ ಪ್ರವೀಣ್, ಹಿರಿಯ ಪತ್ರಕರ್ತ ಮಾರಣ್ಣ ಸೇರಿದಂತೆ ತಾಲೂಕು ಪತ್ರಕರ್ತರು ಜೊತೆಯಲ್ಲಿದ್ದರು.

# ಧೂಳೆಹೊಳೆಯಲ್ಲಿ ಸ್ಮಾರ್ಟ್ ಕ್ಲಾಸ್‌ಗೆ ಚಾಲನೆ

ಮಲೇಬೆನ್ನೂರು: ಇನ್ನು ಹತ್ತು ವರ್ಷದಲ್ಲಿ ಖಾಸಗಿ ಶಾಲೆ ಕ್ಷೀಣವಾಗಿ ಸರ್ಕಾರಿ ಶಾಲೆಗಳು ಉನ್ನತ ಸ್ಥಾನ ಪಡೆಯುತ್ತವೆ ಎಂದು ಬೆಂಗಳೂ ರಿನ ಯುವ ಬೆಂಗಳೂರ್ ಟ್ರಸ್ಟ್ ಮುಖ್ಯಸ್ಥ ಕಿರಣ್ ಸಾಗರ್ ಅಭಿಪ್ರಾಯಪಟ್ಟರು.

ಸಮೀಪದ ಧೂಳೆಹೊಳೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ಮಾರ್ಟ್ ಕ್ಲಾಸ್ ಅನಾವರಣಗೊಳಿಸಿ ಮಾತನಾಡಿದ ಅವರು, 1ನೇ ತರಗತಿಯಿಂದ 10 ನೇ ತರಗತಿಯವರೆಗೆ ಕನ್ನಡ, ಇಂಗ್ಲಿಷ್ ವಿಷಯ ಹೊರತುಪಡಿಸಿ ಎಲ್ಲಾ ಪಠ್ಯ ಪುಸ್ತಕಗಳ ಅಧ್ಯಯಗಳು ಒಳಗೊಂ ಡಿದ್ದು, 3000 ಶಾಲೆಯ 3 ಲಕ್ಷ ವಿದ್ಯಾರ್ಥಿಗಳು ಸ್ಮಾರ್ಟ್‌ಕ್ಲಾಸ್‌ನ ತರ ಬೇತಿ ನೀಡಲಾಗಿದೆ. ಅದರಲ್ಲಿ 156 ಶಾಲೆಗಳನ್ನು ದತ್ತು ಪಡೆದು ಸ್ಮಾರ್ಟ್ ಕ್ಲಾಸ್ ಆರಂಭಿಸಲಾಗಿದೆ ಎಂದರು.

ಆರೋಗ್ಯ, ಶಿಕ್ಷಣ ಮತ್ತು ಊಟದಿಂದ ಮಾತ್ರ ಅಭಿವೃದ್ಧಿ ಸಾಧ್ಯ. ಸಮಾಜ ಸೇವೆ, ವ್ಯಾಪಾರ ಬೇರೆ ಬೇರೆಯಾಗಿದೆ. ಒಂದಕ್ಕೊಂದು ಮಿಕ್ಸ್ ಆಗಬಾರದು. ಮಿಕ್ಸ್ ಆದರೆ ದಾರಿ ತಪ್ಪಿದಂತೆ ಎಂದು ಭಾವಿಸಬೇಕೆಂದರು.

ಅಮೆರಿಕಾದಲ್ಲಿ ಸರ್ಕಾರಿ ಶಾಲೆ ಮುಂಭಾಗ ಕ್ಯೂ ಇರುತ್ತೆ. ದೇಶದ ಇಂಜಿನಿಯರ್‌ಗಳಾದ ಶಿಕ್ಷಕರ ಮೌಲ್ಯಗಳು ಕಡಿಮೆಯಾಗಬಾರದು ಎನ್ನುವ ಸದುದ್ದೇಶದಿಂದ ಚಿಕ್ಕ ಮಕ್ಕಳಿಗೆ ಸ್ಮಾರ್ಟ್ ತರಗತಿಗೆ ಆದ್ಯತೆ ನೀಡಲಾಗುತ್ತದೆ. ಇಂಗ್ಲಿಷ್ ಮತ್ತು ಕಂಪ್ಯೂಟರ್ ಎಲ್ಲವೂ ಅಲ್ಲ ಎಂಬುದು ನೆನಪಿರಲಿ ಎಚ್ಚರಿಸಿದರು.




ಮಲೇಬೆನ್ನೂರು ಸಮೀಪದ ಧೂಳೆಹೊಳೆ ಶಾಲೆಯಲ್ಲಿ ಸ್ಮಾರ್ಟ್ ಕ್ಲಾಸ್‌ಗೆ ಚಾಲನೆ ನೀಡಲಾಯಿತು.

ಶೈಕ್ಷಣಿಕ ವರ್ಷದ ಕೊನೆ ಮೂರು ತಿಂಗಳು ಪಠ್ಯ ಪುಸ್ತಕದ ಜ್ಞಾನ ಪಡೆಯಬೇಕು. ಮಕ್ಕಳು ಪ್ರಕೃತಿ ಜತೆ ಸಂಪರ್ಕ ತಪ್ಪಿದ್ದಾರೆ. ಹೀಗಾಗಿ ಮೊಬೈಲ್ ತಾರಾಲಯ ಮಾಡಿದ್ದೇವೆ. ಕಲಾ ವಿಷಯ ಓದಿದಾಗ ಮೌಲ್ಯ ತಿಳಿಯುತ್ತೇವೆ. ಮೌಲ್ಯಗಳ ಜತೆ ಓದಬೇಕಿದೆ ಎಂದು ತಿಳಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ಕೆ.ನಿಜಲಿಂಗಪ್ಪ, ರೈತ ಮುಖಂಡ ಕೆ.ಹಾಲನ ಗೌಡ, ಪ್ರೌಢಶಾಲಾ ಶಿಕ್ಷಕ ಡಿ.ಎಂ.ಮಂಜುನಾಥಯ್ಯ, ಕಲಾವಿದ ಮೆಹಂದಳೆ, ರುದ್ರಪ್ಪ, ಮುಖ್ಯ ಶಿಕ್ಷಕ ಬಸವರಾಜಪ್ಪ, ನಿ.ಶಿ. ವಿರೂಪಾಕ್ಷಪ್ಪ, ಕೆ.ಜಿ.ಶಿವಕುಮಾರ್, ಪ್ರಕಾಶ್,ಶಿಕ್ಷಕ ಶರಣ್‌ಕುಮಾರ್ ಹೆಗಡೆ, ರಾಘವೇಂದ್ರ,, ಸಂತೋಷ್, ಅಶೋಕ್, ರುದ್ರಪ್ಪ, ಹೀರು ನಾಯ್ಕ್, ಚನ್ನಕೇಶವ ಕಟ್ಟೆ ಇದ್ದರು.